ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಡಗು ಜಿಲ್ಲೆ, ಮಡಿಕೇರಿ-571201
Office of the Deputy Commissioner, Kodagu District, Madikeri-571201
ದೂರವಾಣಿ ಸಂ:08272-225500 ಫ್ಯಾಕ್ಸ್ ಸಂ:225900 E-Mail:-deo.kodagu@gmail.com Web: https://kodagu.nic.in

ದಿನಾಂಕ:03-05-2019

## ಪತ್ರಿಕಾ ಪ್ರಕಟಣೆ

ವಿಷಯ: 2018-19ನೇ ಸಾಲಿನಲ್ಲಿ ಅತೀವೃಷ್ಟಿ ಮತ್ತು ಪ್ರಕೃತಿ ವಿಕೋಪದಿಂದ ಉಂಟಾದ ಬೆಳೆಹಾನಿ ಬಾಬ್ತು ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಗಳ ಖಾತೆಗಳಿಗೆ ಪರಿಹಾರ ಸಂದಾಯವಾಗಿರುವ ಬಗ್ಗೆ.

---------

2018-19ನೇ ಸಾಲಿನಲ್ಲಿ ಅತೀವೃಷ್ಟಿ ಮತ್ತು ಪ್ರಕೃತಿ ವಿಕೋಪದಿಂದ ಉಂಟಾದ ಬೆಳೆಹಾನಿ ಬಾಬ್ತು 33,548 ರೈತರ ಬೆಳೆ ಹಾನಿ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸಿದ್ದು, ಈ ವರೆಗೂ ಜಿಲ್ಲೆಯ ಒಟ್ಟು 32,312 ರೈತರುಗಳಿಗೆ ರೂ.32,76,26,402/- (ರೂಪಾಯಿ ಮೂವತ್ತೆರಡು ಕೋಟಿ ಎಪ್ಪತ್ತಾರು ಲಕ್ಷದ ಇಪ್ಪತ್ತಾರು ಸಾವಿರದ ನಾಲ್ಕುನೂರ ಎರಡು) ಗಳನ್ನು ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಗಳ ಖಾತೆಗಳಿಗೆ ಪರಿಹಾರ ಸಂದಾಯ ಮಾಡಲಾಗಿದೆ. ವರ್ಗವಾರು ವಿವರ ಕೆಳಕಂಡಂತಿದೆ.

| ಕ್ರ. ಸಂ. | ವಿವರ | ನೋಂದಣಿ ಮಾಡಿಕೊಂಡ ರೈತರ ಸಂಖ್ಯೆ | ಪರಿಹಾರ ಸಂದಾಯವಾದ ರೈತರ ಸಂಖ್ಯೆ | ಪರಿಹಾರ ಸಂದಾಯವಾದ ಪ್ರಕರಣಗಳ ಶೇಕಡವಾರು | ಸಂದಾಯವಾದ ಪರಿಹಾರ (ರೂ.ಗಳಲ್ಲಿ) | ಪರಿಹಾರ ಪಾವತಿಸಲು ಬಾಕಿ ಇರುವ ಪ್ರಕರಣಗಳು |
|---|---|---|---|---|---|---|
| 1 | ಪ್ರವಾಹದಿಂದ ಉಂಟಾದ ಬೆಳೆ ನಷ್ಟದ ಬಾಬ್ತು | 31,931 | 31,196 | 97.70 | 30,80,30,934.50 | 735 |
| 2 | ಭೂಕುಸಿತದಿಂದ ಉಂಟಾದ ಬೆಳೆ ನಷ್ಟದ ಬಾಬ್ತು | 1,247 | 765 | 61.35 | 1,75,03,125.00 | 482 |
| 3 | ಮಣ್ಣು ತುಂಬಿಕೊಂಡು ಉಂಟಾದ ಬೆಳೆ ನಷ್ಟದ ಬಾಬ್ತು | 370 | 351 | 94.86 | 20,92,342.50 | 19 |
| | ಒಟ್ಟು | 33,548 | 32,312 | 96.32 | 32,76,26,402.00 | 1236 |

Scanned by CamScanner

ಮೇಲ್ಕಂಡಂತೆ ಪರಿಹಾರ ಪಾವತಿಸಲಾದ ಫಲಾನುಭವಿ ರೈತರ ಪಟ್ಟಿಯನ್ನು ಕೊಡಗು ಜಿಲ್ಲಾ ವೆಬ್ ಸೈಟ್ https://kodagu.nic.in ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯತಿ ಕಚೇರಿಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಹಾಗೂ ಪರಿಹಾರ ಪಾವತಿಸಲು ಬಾಕಿ ಇರುವ 1236 ಪ್ರಕರಣಗಳಲ್ಲಿ ಪರಿಹಾರ ಪಾವತಿಸಲು ತುರ್ತು ಕ್ರಮ ವಹಿಸಲಾಗುತ್ತಿದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

**ಇವರಿಗೆ:**

ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಕಳುಹಿಸುತ್ತಾ ಈ ವಿಚಾರವನ್ನು ಸ್ಥಳೀಯ ಮತ್ತು ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ ಸುದ್ದಿ ರೂಪದಲ್ಲಿ ಪ್ರಕಟಿಸಲು ಸೂಚಿಸಿದೆ.

Scanned by CamScanner